# ಕನ್ನಡ ನುಡಿ ಹಬ್ಬದ ಸಂಭ್ರಮ



ನಮ್ಮ ಕರುನಾಡ ಹಬ್ಬ ಕನ್ನಡ ರಾಜ್ಯೋತ್ಸವವನ್ನು ನಿಸರ್ಗ ವಿದ್ಯಾನಿಕೇತನ ಶಾಲೆಯಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಗುತ್ತದೆ. ಪ್ರತಿವರ್ಷ ನವೆಂಬರ್ ಒಂದರಂದು ತಾಯಿ ಭುವನೇಶ್ವರಿ ದೇವಿಯ ಭಾವಚಿತ್ರವನ್ನಿರಿಸಿ, ಕನ್ನಡ ಬಾವುಟವನ್ನು ಹಾರಿಸುವುದರ ಮೂಲಕ ತಾಯಿಯ ಪಾದಕಮಲಗಳಿಗೆ ನಮಸ್ಕರಿಸುವ ಸಂಪ್ರದಾಯ ಬೆಳೆದುಬಂದಿದೆ. ಮಕ್ಕಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ನಾಡದೇವಿಗೆ ನುಡಿನಮನ ಸಲ್ಲಿಸುತ್ತಾರೆ. ಕನ್ನಡ ನಾಡು ನುಡಿಯ ಬಗ್ಗೆ ವಿಶೇಷ ಉಪನ್ಯಾಸ, ಕನ್ನಡ ಗಾಯನ, ನೃತ್ಯಮಾಲಾ ಮತ್ತಿತರ ಕಾರ್ಯಕ್ರಮಗಳು ಜರುಗಲಿವೆ. ವಿಶೇಷವಾಗಿ ಅಂದು ಮಕ್ಕಳಿಂದ ಕನ್ನಡವನ್ನು ತಪ್ಪಿಲ್ಲದೆ ಓದುವುದು ಮತ್ತು ಬರೆಯಲು ಶಪಥ ಮಾಡಿಸಿ ನುಡಿ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತದೆ.

## ರಾಷ್ಟ್ರೀಯ ವೈದ್ಯರ ದಿನ

ರಾಷ್ಟ್ರೀಯ ವೈದ್ಯರ ದಿನಾಚರಣೆಯ ಪ್ರಯುಕ್ತ ಶಾಲೆಯ ಮಕ್ಕಳು ನೆರೆಹೊರೆಯ ಆಸ್ಪತ್ರೆಗಳಿಗೆ ಭೇಟಿ ನೀಡಿ, ವೈದ್ಯರಿಗೆ ಹೂಗುಚ್ಛ ಮತ್ತು ಉಡುಗೊರೆ ನೀಡುವುದರ ಮೂಲಕ ಶುಭಾಶಯ ಕೋರುವ ಸಂಪ್ರದಾಯ ಮುಂದುವರಿದಿದೆ. ಈ ದಿನಾಚರಣೆಗೆ ವೈದ್ಯರ ವಲಯದಿಂದ ಶಾಲೆಯ ಬಗ್ಗೆ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ.



## ಶಿವಪುರ ಧ್ವಜ ಸತ್ಯಾಗ್ರಹ ಸೌಧಕ್ಕೆ ಕಾಲ್ನಡಿಗೆ ಜಾಥಾ



**ಭಾ**ರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ 150ನೇ ವರ್ಷಾಚರಣೆಯ ಅಂಗವಾಗಿ 2007 ಆಗಸ್ಟ್ 12ರಂದು ನಿಸರ್ಗ ವಿದ್ಯಾನಿಕೇತನ ಶಾಲಾ ಮಕ್ಕಳು ಮಂಡ್ಯ ಜಿಲ್ಲೆಯ ಶಿವಪುರದ ಧ್ವಜ ಸತ್ಯಾಗ್ರಹ ಸೌಧಕ್ಕೆ ಕಾಲ್ನಡಿಗೆ ಜಾಥಾ ನಡೆಸಿದ್ದು ಐತಿಹಾಸಿಕ ದಾಖಲೆ.

ಸ್ವಾತಂತ್ರ ಹೋರಾಟದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಶಾಲಾ ಆಡಳಿತ ಮಂಡಳಿಯ ವತಿಯಿಂದ ಶಿವಪುರದವರೆಗೆ ಮಕ್ಕಳ ಕಾಲ್ನಡಿಗೆ ಜಾಥಾ ಹಮ್ಮಿಕೊಳ್ಳಲಾಗಿತ್ತು. ಶಾಲಾ ಪ್ರಾಂಶುಪಾಲರು ಹಾಗೂ ಶಿಕ್ಷಣ ತಜ್ಞರು ಆದ ಉದಯರತ್ನಕುಮಾರ್ ಅವರ ನೇತೃತ್ವದಲ್ಲಿ 150ಕ್ಕೂ ಹೆಚ್ಚು ಮಕ್ಕಳು ಹಾಗೂ ಶಿಕ್ಷಕರು ಮೂರು ದಿನಗಳ ಕಾಲ ಕಾಲ್ನಡಿಗೆಯಲ್ಲಿ ಸಾಗಿದರು. ಕೆಂಗೇರಿ, ಬಿಡದಿ ರಾಮನಗರ, ಚನ್ನಪಟ್ಟಣ, ಮದ್ದೂರು, ಮಂಡ್ಯ ಮತ್ತಿತರ ಕಡೆ ಸ್ವಾತಂತ್ರೋತ್ಸವದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು.

ಶಾಲಾವರಣದಿಂದ ಆರಂಭಗೊಂಡ ಜಾಥಾಕ್ಕೆ ಸ್ವಾತಂತ್ರ ಹೋರಾಟಗಾರರು ಹಾಗೂ ಸಾಹಿತಿ ಹಾಗೂ ಗುಡಿಬಂಡೆ ರಾಮಚಾರ್ ರವರು, ವಿಧಾನಪರಿಷತ್ ಸದಸ್ಯರು ಹಾಗೂ ಸಚಿವರಾಗಿದ್ದ ರಾಮಚಂದ್ರಗೌಡರು ಹಸಿರು ನಿಶಾನೆ ತೋರಿಸಿದರು. ಅಲ್ಲದೆ, ಮಕ್ಕಳ ಕಾಲ್ನಡಿಗೆ ಜಾಥಾದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಬೆಂಗಳೂರು ಉತ್ತರ ವಿಭಾಗದ ಡಿಸಿಪಿ ಸೈಯದ್ ಮತ್ತಿತರ ಗಣ್ಯರು ಪಾಲ್ಗೊಂಡು ಶುಭಕೋರಿದರು.

ಶಿವಪುರದಲ್ಲಿ ಧ್ವಜ ಸತ್ಯಾಗ್ರಹ ಸೌಧ ಸಮಿತಿಯ ಪದಾಧಿಕಾರಿಗಳು, ಸ್ವಾತಂತ್ರ್ಯ ಸೇನಾನಿಗಳು ಹಾಗೂ ಮುಖಂಡರು ಮಕ್ಕಳ ಕಾಲ್ನಡಿಗೆ ಜಾಥಾದ ಬಗ್ಗೆ ಕೊಂಡಾಡಿದರಲ್ಲದೆ, ಮಕ್ಕಳ ಈ ನಡೆ ಇಡೀ ದೇಶಕ್ಕೆ ಮಾದರಿ ಎಂದು ಪ್ರಶಂಸೆ ವ್ಯಕ್ತಪಡಿಸಿದರು.



## ವಿಶ್ವ ಯೋಗ ದಿನಾಚರಣೆ ಸಾಮೂಹಿಕ ಯೋಗಾಭ್ಯಾಸ

ವಿಶ್ವ ಯೋಗ ದಿನಾಚರಣೆ-ಯ ಅಂಗವಾಗಿ ಶಾಲೆಯಲ್ಲಿ ವಿಶೇಷ ಯೋಗ ಕಾರ್ಯಕ್ರಮ ನಡೆಸಲಾಗುತ್ತಿದೆ. ಪ್ರತಿವರ್ಷವೂ ಶಾಲಾ ಮಕ್ಕಳಿಗೆ ಯೋಗಾಭ್ಯಾಸ ಮಾಡುವ ಮೂಲಕ ಯೋಗವೇ ಬದುಕಿನ ಯೋಗ ಎಂಬ ಸಾರವನ್ನು ಸಾರುತ್ತಿದೆ. ವಾರದಲ್ಲಿ ಒಂದು ದಿನ ಮಕ್ಕಳಿಗೆ ಯೋಗಾಭ್ಯಾಸ ಕೂಡ ಮಾಡುತ್ತಿದ್ದು, ಬೆಂಗಳೂರಿನ ವಿವಿಧೆಡೆ ಕೂಡ ಮಕ್ಕಳು ಸಾಮೂಹಿಕ ಯೋಗ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶಾಲೆಗೆ ಕೀರ್ತಿ ತಂದಿದ್ದಾರೆ. ಮಕ್ಕಳು ವಿವಿಧ ಭಂಗಿಯ ಯೋಗ ಹಾಗೂ ಸೂರ್ಯ ನಮಸ್ಕಾರವನ್ನು ಮಂತ್ರ ಪಠಣ ಮಾಡುವುದರ ಮೂಲಕ ಯೋಗದಲ್ಲಿ ಸಿದ್ದಿಗಳಾಗಿರುವುದು ಹೆಗ್ಗಳಿಕೆ

### ವಿಷ್ಣು ಸಹಸ್ರನಾಮ ಪಾರಾಯಣ

ಶಾಲೆಯಲ್ಲಿ ಮಕ್ಕಳಿಗೆ ಕೇವಲ ಪಠ್ಯ ಚಟುವಟಿಕೆಗಳಲ್ಲದೆ, ಪಠ್ಯೇತರ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿದ್ದಾರೆ. ಶಾಲೆಯಲ್ಲಿ ಪ್ರತಿಶನಿವಾರ ಎಲ್ಲಾ ಮಕ್ಕಳು ವಿಷ್ಣು ಸಹಸ್ರನಾಮವನ್ನು ಪಾರಾಯಣ ಮಾಡುತ್ತಿದ್ದಾರೆ. ಅಲ್ಲದೆ, ನಗರದ ವಿವಿಧೆಡೆ ನಡೆದ ಕಾರ್ಯಕ್ರಮಗಳಲ್ಲಿ ಮಕ್ಕಳು ಭಾಗವಹಿಸಿ ವಿಷ್ಣು ಸಹಸ್ರನಾಮ ಪಠಿಸುತ್ತ ಎಲ್ಲೆಡೆ ಧಾರ್ಮಿಕ ಕೈಂಕರ್ಯವನ್ನು ಹರಡಿದ್ದಾರೆ.



ಶಾಲೆಯಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ಕೂಡ ಆಚರಿಸಿಕೊಂಡು ಬರಲಾಗುತ್ತಿದೆ. ಶಾಲೆಯ ಪುಟ್ಟ ಪುಟ್ಟ ಮಕ್ಕಳು ಕೃಷ್ಣ, ರಾಧೆಯವರ ವೇಷಭೂಷಣ ಧರಿಸಿ ಬರುವುದನ್ನು ನೋಡುವುದೇ ಚೆಂದ. ಮತ್ತೆ, ಕೃಷ್ಣನ ಜೀವನದ ವಿವಿಧ ಹಂತವನ್ನು ಮಕ್ಕಳ ಕಥಾರೂಪದಲ್ಲಿ ವಿವರಿಸುವುದು, ಕೃಷ್ಣನ ಶ್ಲೋಕಗಳನ್ನು ಪಠಣ ಮಾಡುವುದು, ಇಸ್ಕಾನ್ ನಿಂದ ಆಯೋಜಿಸುವ ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸುವುದು, ಮೊಸರು ಕುಡಿಕೆ ಹೊಡೆಯುವ ಆಟ ಹೀಗೆ ಹಲವಾರು ಕೃಷ್ಣನಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ.

## ಕಾರ್ತಿಕ ದೀಪೋತ್ಸವ; ದಕ್ಷಿಣಮೂರ್ತಿಗೆ ವಿಶೇಷ ಪೂಜೆ



ಕಾರ್ತಿಕ ಮಾಸದ ಕಡೆಯ ಸೋಮವಾರದಂದು ಶಾಲೆಯಲ್ಲಿ ವಿಶೇಷ ದೀಪೋತ್ಸವ ಕಾರ್ಯಕ್ರಮ. ಶಾಲಾವರಣದಲ್ಲಿ ಇರುವ ದಕ್ಷಿಣಮೂರ್ತಿ ದೇವಾಲಯದ ಸುತ್ತಲೂ ಮತ್ತು ಶಾಲಾ ಸುತ್ತಮುತ್ತ ಕೂಡ ಬಣ್ಣ ಬಣ್ಣದ ದೀಪಗಳನ್ನು ಹಚ್ಚಿ ಪೂಜಿಸುವುದು ಹಲವು ವರ್ಷಗಳಿಂದ ನಡೆದುಬಂದಿದೆ. ಅಂದು ದಕ್ಷಿಣಮೂರ್ತಿ ದೇವಸ್ಥಾನದಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ನಡೆಯುತ್ತವೆ. ಇದೇ ವೇಳೆ ಖ್ಯಾತ ವಿದ್ವಾನರಿಂದ ಸಂಗೀತ ಕಛೇರಿಯನ್ನು ಏರ್ಪಡಿಸಲಾಗುತ್ತದೆ. ಈ ದೀಪೋತ್ಸವ ಕಾರ್ಯಕ್ರಮಕ್ಕೆ ಶಾಲಾ ಮಕ್ಕಳು, ಪೋಷಕರಲ್ಲದೆ, ಸಾರ್ವಜನಿಕರು ಕೂಡ ಆಗಮಿಸುವುದು ವಿಶೇಷ.



## ಸಾಮೂಹಿಕ ಸೂರ್ಯ ನಮಸ್ಕಾರ

ಪ್ರತಿವರ್ಷವೂ ತಿರುಪತಿ ತಿರುಮಲ ದೇವಸ್ಥಾನಗಳು ಹಾಗೂ ಹಿಂದೂ ಧರ್ಮ ಪ್ರಚಾರ ಪರಿಷತ್ ವತಿಯಿಂದ ನಿಸರ್ಗ ವಿದ್ಯಾನಿಕೇತನ ಶಾಲೆಯಲ್ಲಿ ಅತ್ಯಂತ ಶ್ರದ್ಧೆ ಮತ್ತು ಭಕ್ತಿಯಿಂದ ರಥಸಪ್ತಮಿ ಕಾರ್ಯಕ್ರಮವನ್ನು ನಡೆಸಿಕೊಂಡು ಬರಲಾಗುತ್ತಿದೆ. ಅಂದು ಶಾಲಾ ವಿದ್ಯಾರ್ಥಿಗಳಿಂದ ಸಾಮೂಹಿಕ ಸೂರ್ಯನಮಸ್ಕಾರ ಮಾಡಿಸಲಾಗುತ್ತದೆ. ಜೊತೆಗೆ ಸೂರ್ಯಾಷ್ಟಕಮ್ ಮಂತ್ರಪಠಣ ಹಾಗೂ ಸೂರ್ಯ ಮಂತ್ರಗಳ ಜಪಗಳನ್ನು ಕೂಡ ಮಕ್ಕಳಿಂದ ಮಾಡಿಸಲಾಗುತ್ತಿದ್ದು, ಇದು ಮಕ್ಕಳಲ್ಲಿ ಧಾರ್ಮಿಕಭಾವ ಹೆಚ್ಚಲು ನೆರವಾಗಿದೆ.

## ಮನ ಸೆಳೆದ, ಜ್ಞಾನ ಹರಡಿದ ವಿದ್ಯಾರ್ಥಿಗಳ ವಿಜ್ಞಾನ-ಕಲಾ ಮಾದರಿ ವಸ್ತು ಪ್ರದರ್ಶನ



ಬಾನಂಗಳದ ಸೂರ್ಯನಿಂದ ಖರ್ಚಿಲ್ಲದೆ ವಿದ್ಯುತ್ ಪಡೆಯುವುದು, ಚಂದ್ರನಲ್ಲಿರುವ ನಾನಾ ವಿಸ್ಮಯಗಳು, ಮಳೆ ನೀರು ಕೊಯ್ಲು, ನಾನಾ ಕೃಷಿ ಮಾದರಿ ಇದು ನಗರದ ಹೆಸರಘಟ್ಟ ರಸ್ತೆಯಲ್ಲಿರುವ ನಿಸರ್ಗ ವಿದ್ಯಾನಿಕೇತನ ಶಾಲೆಯಲ್ಲಿ ಕಂಡು ಬಂದ ದೃಶ್ಯ. ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ 'ನಿಸರ್ಗ ಆವರಣ' ದಲ್ಲಿ ಜ್ಞಾನ- ವಿಜ್ಞಾನ ವಸ್ತು ಪ್ರದರ್ಶನದಲ್ಲಿ ಮಕ್ಕಳು ತಯಾರಿಸಿಕೊಂಡು ಬಂದಿದ್ದ ನಾನಾ ತರದ ಮಾದರಿಗಳು, ಅವುಗಳ ಕುರಿತು ಮಕ್ಕಳು ನೀಡುತ್ತಿದ್ದ ತೊದಲು ನುಡಿಯ ವಿವರಣೆ ಪ್ರದರ್ಶನ, ವಿಕ್ಷಿಸಲು ಆಗಮಿಸಿದ್ದ ಅತಿಥಿಗಳು, ಶಿಕ್ಷ ಕರು, ವಿದ್ಯಾರ್ಥಿಗಳು ಹಾಗೂ ಪೋಷಕರ ಮೆಚ್ಚುಗೆಗೆ ಪಾತ್ರವಾಯಿತು.

## ಗೌರಿ ಗಣೇಶ ಹಬ್ಬ ಆಚರಣೆ

ಪ್ರತಿವರ್ಷ ಶಾಲೆಯಲ್ಲಿ ಸಂಪ್ರದಾಯಿಕ ಗೌರಿ ಗಣೇಶ ಹಬ್ಬವನ್ನು ಆಚರಿಸಲಾಗುತ್ತದೆ. ಗೌರಿ ಮತ್ತು ಗಣೇಶ ಮೂರ್ತಿಯನ್ನು ಶಾಲಾವರಣದಲ್ಲಿ ಪ್ರತಿಷ್ಠಾಪಿಸಲಾಗುತ್ತದೆ. ಶಾಸ್ತ್ರೋಕ್ತವಾಗಿ ಮೂರು ದಿನ ಇರಿಸಿ ಪೂಜಾ ಕೈಂಕರ್ಯವನ್ನು ನೆರವೇರಿಸಲಾಗುವುದು. ಪ್ರತಿದಿನ ಪ್ರಸಾದ ವಿನಿಯೋಗ ಕಾರ್ಯಕ್ರಮ ಇರುತ್ತದೆ.

